**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ.4/23**

**ಸಿ.ಡಬ್ಲ್ಯೂ-2 ಪಿ.ಡಬ್ಲ್ಯೂ- 2**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟೇಶ ನಾಯಕ |
| ತಂದೆಯ/ ಗಂಡನ ಹೆಸರು | : | ಅಂಕನಾಯಕ್ |
| ವಯಸ್ಸು | : | 60 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ ಸ್ಥಳ | : | ಬೀದರಹಳ್ಳಿ |

**ದಿನಾಂಕ 18.07.2025 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ತಮ್ಮ. ಚಾಸಾ-3 ಅಣ್ಣ, ಚಾಸಾ-4 ಮತ್ತು 5 ಗೊತ್ತು. ಆರೋಪಿತರು ಗೊತ್ತು. ದಿಃ30.06.2022 ರಲ್ಲಿ ಮಧ್ಯಾಹ್ನ 12.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ಪಕ್ಕದ ಜಮೀನಿನವರು ನಿಮ್ಮ ಜಮೀನಿನಲ್ಲಿ ಬೇಲಿ ಕಿತ್ತು ಹಾಕುತ್ತಿದ್ದಾರೆ ಎಂದು ತಿಳಿಸಿರುತ್ತಾರೆ. ಆಗ ಚಾಸಾ-1 ರವರು ಮೊದಲು ಹೋಗಿರುತ್ತಾರೆ ನಂತರ ನಾನು ಹೋಗಿರುತ್ತೇನೆ. ನಾನು ಹೋಗುವಷ್ಟರಲ್ಲಿ ಚಾಸಾ-1 ರವರಿಗೆ ಆರೋಪಿತರು ಎಲ್ಲರೂ ಸೇರಿ ಮಚ್ಚು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆ. ಆರೋಪಿ 1 ರಿಂದ 4 ರವರು ನನಗೆ ಹೊಡೆದಿರುತ್ತಾರೆ. ನಂತರ ನನ್ನ ಮಗ ಪ್ರಕಾಶ ಬಂದು ನಮ್ಮನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ವಿಚಾರವಾಗಿ ಹೇಳಿಕೆ ಕೊಟ್ಟಿರುತ್ತೇನೆ. ಅದೇ ದಿನ ಸ್ಥಳ ಮಹಜರ ಜರುಗಿಸಿರುತ್ತಾರೆ. ಚಾಸಾ-4 ಮತ್ತು 5 ರವರು ಸದರಿ

ಮಹಜರಗೆ ಸಹಿ ಮಾಡಿರುತ್ತಾರೆ ಮಹಜರನ್ನು ನಿಪಿ-2, ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಮುದ್ದೆಮಾಲುಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಸರ್ವೇ ನಂ 4 ರಲ್ಲಿ ಚಾಸಾ-1 ರವರು ಕೆಲಸ ಮಾಡುತ್ತಿದ್ದಾಗ ಆರೋಪಿತರು ಸದರಿ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿರುತ್ತಾರೆ ಎಂದು ಚಾಸಾ-3 ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಕಲ್ಲು ಕಂಬಗಳನ್ನು ಮುರಿದು 30 ಸಾವಿರ ನಷ್ಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಮಾರು 1 ಲಕ್ಷ ನಷ್ಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ 3 ಮತ್ತು 4 ರವರು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿ 5 ರವರು ಕುಮ್ಮಕು ನೀಡಿರುತ್ತಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸದರಿ ದಿನ ನಾನು ಮನೆಯಲ್ಲಿ ಇದ್ದೆ. ನನಗೆ 11.30 ಯಲ್ಲಿ ಪಕ್ಕದ ಜಮೀನವರಾದ ಸುರೇಶ ರವರು ವಿಷಯ ತಿಳಿಸಿರುತ್ತಾರೆ. ಚಾಸಾ-1 ರವರು ಹೋದ 15 ನಿಮಿಷ ನಂತರ ನಾನು ಹೋಗಿರುತ್ತೇನೆ. ನಾನು ಹೋದಾಗ ಚಾಸಾ-1 ರವರನ್ನು ಹೊಡೆಯುತ್ತಿದ್ದರು. 2 ಗಂಟೆಗೆ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ 3 ದಿನ ಇರುತ್ತೇನೆ. ಆರೋಪಿತರು ನಮ್ಮ ವಿರುದ್ಧ OS 188/22 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ತಾತ್ಕಾಲಿಕ ತಡೆ ಆಜ್ಞೆ ಆದೇಶ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿತರು ನಮ್ಮ ವಿರುದ್ಧ CR 83/2022 ರಂತೆ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದುಕೊಂಡಿರುತ್ತಾರೆ. ಸ್ಥಳ ಮಹಜರ ಸಮಯದಲ್ಲಿ ಸುಮಾರು 10 ಜನ ಇದ್ದರು. ಮುಂದುವರೆದು ಸ್ಥಳದಲ್ಲಿ 3 ಜನ ಇರುತ್ತಾರೆ ಎಂದು ನುಡಿಯುತ್ತಾರೆ. ಕೃತ್ಯ ನಡೆದ ಸ್ಥಳದ ಪೋಟೋಗಳನ್ನು ಪೊಲೀಸರು ತೆಗೆದಿರುತ್ತಾರೆ. ಮುದ್ದೆಮಾಲುಗಳನ್ನು ಪೊಲೀಸರಿಗೆ ಯಾರು ಕೊಟ್ಟರು ಎಂದರೆ ಅವರೇ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ, ಮುದ್ದೆಮಾಲುಗಳ

ಮೇಲೆ ನನ್ನ ಸಹಿ ಪಡೆದಿರುವುದಿಲ್ಲ. ನಿಪಿ-2 ರಲ್ಲಿ ಇರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಮಕ್ಕಳು ಪೊಲೀಸ್ ಎಂದರೆ ಸರಿ. ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳು ಈ ಪ್ರಕರಣಕ್ಕೆ ಸಂಬಂಧ ಇಲ್ಲದಿದ್ದರೂ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕಲ್ಲು ಕಂಬಗಳನ್ನು ಮುರಿದು ನಷ್ಟ ಮಾಡದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಜಮೀನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಜೆ 5 ಗಂಟೆಗೆ ಪೊಲೀಸರು ಸ್ಥಳಕ್ಕೆ ಬಂದಿರುತ್ತಾರೆ. ನಿಪಿ-2 ರಲ್ಲಿ ಇರುವ ಸಹಿ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು).

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ.ಕೋಟೆ.**